ಶ್ರೀ ವಿ. ಎಲ್. ಪಾಟೀಲ್.--ನಾನು ಅಫಜಲಾಪುರಕ್ಕೆ ಆಗಾಗ ಹೋಗುತ್ತಿರುತ್ತೇನೆ. ದತ್ತಾತ್ರೇಯ ದೇವಸ್ಥಾನದ ಸುತ್ತಮುತ್ತ ಪಾದಚಾರಿಗಳಿಗೆ ಓಡಾಡಲು ತೊಂದರೆಯಾಗುತ್ತಿತ್ತು. ಇದ್ದ ಜಾಗದಲ್ಲಿ ನಾಲ್ಕು ಮನೆಗಳನ್ನು ಕೆಡವಿಸಿದ್ದೇವೆ. ಈ ಬಗ್ಗೆ 25 ಸಾವಿರ, 42 ಸಾವಿರ, 25 ಸಾವಿರ, 30 ಸಾವಿರ ಹಾಗೂ 5 ಸಾವಿರ ರೂಪಾಯಿಗಳು ಪರಿಹಾರ ಕೊಟ್ಟಿದ್ದೇವೆ. ಹಾಗೂ ಸ್ಥಳವನ್ನು ವಶ ಪಡಿಸಿಕೊಂಡಿದ್ದೇವೆ. ಇನ್ನು ಅಲ್ಲಿ ಸುತ್ತಮುತ್ತ ಇರುವ ಮನೆಗಳು ಅಂದರೆ ಪೂಜಾರಿಗಳು. ಅರ್ಚಕರುಗಳು ವಾಸ ಮಾಡುವಂಥ ಮನೆಗಳಾಗಿವೆ. ಇವರು ಬಹಳ ಪುರಾತನ ಕಾಲದಿಂದ ಅಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ. ಇನ್ನು ಅವರ ಮನೆಗಳನ್ನು ಕೆಡವ ಬೇಕೆಂದರೆ ಅವರಿಗೂ ಸಹ ಕಾಂಪನ್‌ಸೇಷನ್ ಕೊಟ್ಟು, ಖಾಲಿ ಮಾಡಿಸಬೇಕಾಗುತ್ತದೆ. ಹಾಗೂ ಹೀಗೆ ಮಾಡಲು ಸುಮಾರು ಮೂರು ನಾಲ್ಕು ತಿಂಗಳುಗಳ ಕಾಲ ಬೇಕಾಗುತ್ತದೆ.

ಶ್ರೀ ಪಂಪಾಪತಿ.--ಇದು ಅವರ ಖಾಸಗಿ ಆಸ್ತಿ ಅಲ್ಲ ಮುಜರಾಯಿ ಇಲಾಖೆಯ ಸ್ವತ್ತು ಇದಾಗಿದೆ. ಇವರನ್ನು ಇದರಿಂದ ಬಿಡಿಸುವುದಕ್ಕೋಸ್ಕರ ಪರಿಹಾರ ಕೊಡಬೇಕಾಗಿದೆ. ಇವರು ಪಟ್ಟಭದ್ರ ಹಿತಾಸಕ್ತಿಗಳಾಗಿ ಅಲ್ಲಿ ಉಳಿದುಕೊಂಡಿದ್ದಾರೆ. ಇವರ ಜಾಗವನ್ನು ವಶಪಡಿಸಿಕೊಂಡು ಅಲ್ಲಿ ಈಗ ಜಾತ್ರೆಗೆ ಬರುವ ಜನರಿಗೆ ಅನುಕೂಲ ಮಾಡಿಕೊಡಬೇಕಾಗಿದೆ. ನೀವೂ ಸಹಾ ಆ ದೇವರ ಭಕ್ತರು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಿ ಎಲ್. ಪಾಟೀಲ್.--ನೂರಾರು ವರ್ಷಗಳಿಂದ ಅಲ್ಲಿ ಅರ್ಚಕರೂ, ಪೂಜಾರಿಗಳು ವಾಸ ಮಾಡುತ್ತಿದ್ದಾರೆ. ಆ ಜಾಗವನ್ನು ಅವರಿಂದ ತೆಗೆದುಕೊಳ್ಳಬೇಕಾದರೆ, ಅವರ ಜೊತೆ ವ್ಯವಹಾರ ಮಾಡಿ ತೆಗೆದುಕೊಳ್ಳುವುದಕ್ಕೆ ಇನ್ನೂ 3-4-ತಿಂಗಳು ಬೇಕಾಗುತ್ತದೆಂದು ನಾನು ಹೇಳುತ್ತಿದ್ದೇನೆ.

ಸಹಕಾರ ಸಾಲಗಳಿಗೆ ಸಂಬಂಧಪಟ್ಟಂತೆ ರೈತರಿಗೆ ಕೊಟ್ಟಿಂತಹ ವಿನಾಯಿತಿ ಬಗ್ಗೆ

321 (728) ಶ್ರೀ ಬಿ. ಬಿ ಚಿನ್ಮುನಕಟ್ಟಿ (ಬಾದಾಮಿ).--ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಮತ್ತು ಇತರ ಸಹಕಾರಿ ಹಣಕಾಸಿನ ಸಂಸ್ಥೆಗಳಿಗೆ ಸಂಬಂಧ ಪಟ್ಟಂತೆ ರೈತರು ಸಾಲ ಮರುಪಾವತಿ ಮಾಡಲು ರಿಯಾಯಿತಿಯನ್ನು ನೀಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಆ ಹಣವನ್ನು ಸರ್ಕಾರವು ಸಂಬಂಧಪಟ್ಟ ಪಿ. ಎಲ್. ಡಿ. ಬಿ. ಮತ್ತು ಸಹಕಾರಿ ಹಣಕಾಸಿನ ಸಂಸ್ಥೆಗಳಿಗೆ ತುಂಬಿತೊಡುವುದೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).--ಅ) ಹೌದು.

ಆ) ಹೌದು

ಶ್ರೀ ಬಿ. ಬಿ. ಚಿನ್ಮುನಕಟ್ಟಿ.--ಈಗಾಗಲೇ ಸರ್ಕಾರದವರು ಕನ್ಸೇಷನ್ ಏನು ಕೊಟ್ಟಿದ್ದಾರೆ, ಅದರಲ್ಲಿ ವಿಎಲ್‌ಡಿ ಬ್ಯಾಂಕಿನ ಮುಖಾಂತರ ಹಾಗೂ ಸೊಸೈಟಿಗಳ ಮುಖಾಂತರ ಹಾಗೂ ಇತರ ಬ್ಯಾಂಕಿನ ಮುಖಾಂತರ ಕೊಡಲಾಗಿದೆ ಎಂಬುದನ್ನು ಚೇರ್‌ಮನ್ ಹೇಳುತ್ತೀರಾ? ಮತ್ತು ಒಟ್ಟು ರಿಯಂಬರ್ಸ್‌ಮೆಂಟ್ ಆಗತಕ್ಕದ್ದು ಎಷ್ಟು ? ಹಾಗೂ ಸರ್ಕಾರದಿಂದ ಬ್ಯಾಂಕಿಗೆ ಕೂಡತಕ್ಕಂಥಾದ್ದು ಎಷ್ಟು ?

ಶ್ರೀ ಆರ್ ಎಲ್ ಜಾಲಪ್ಪ --ಅಧ್ಯಕ್ಷರೇ, ಮಾನ್ಯ ಸದಸ್ಯರು ಪಿ. ಎಲ್, ಡಿ. ಬ್ಯಾಂಕ್, ಸೊಸೈಟಿಗಳು, ಹಾಗೂ ಇತರ ಬ್ಯಾಂಕುಗಳ ಬಗ್ಗೆ ಏನು ವಿವರ ಕೇಳಿದ್ದಾರೆ, ಆ ಬಗ್ಗೆ ವಿವರಣೆ ನನ್ನಲ್ಲಿ ಸಧ್ಯ ಇಲ್ಲ, ಇದನ್ನು ಒದಗಿಸಿ ಕೊಡುತ್ತೇನೆ. ಒಟ್ಟು 27.19 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡಬೇಕಾಗಿದೆ. ಇದರಲ್ಲಿ ಈಗಾಗಲೇ 9 ಕೋಟಿ ಆರವತ್ತು ಲಕ್ಷ ರೂಪಾಯಿ ಕೊಟ್ಟಿದ್ದು ಇನ್ನು 17.59 ಕೋಟಿ ರೂಪಾಯಿ ಕೊಡಬೇಕಾಗುತ್ತದೆ.

ಶ್ರೀ ಬಿ. ಬಿ. ಚಿನ್ಮುನಕಟ್ಟಿ.--ಮಾನ್ಯ ಅಧ್ಯಕ್ಷರೇ, 17 ಕೋಟಿ ರೂಪಾಯಿಗಳು ಕೊಡಬೇಕಾಗಿದ್ದು ದನ್ನು ಸುಮಾರು ಎಷ್ಟು ತಿಂಗಳಲ್ಲಿ ಕೊಡಲಾಗುತ್ತಿದೆ ? ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೇ ? ಅಲ್ಲಿ ಚುನಾವಣೆಗಳು ನಡೆಯಲಿದೆ. ಚುನಾವಣೆಗಳು ಮಾಡಬೇಕೆಂದರೆ ಪೂರ್ತಿ ರೀಯಂಬರ್ಸ್‌ಮೆಂಟ್ ಮಾಡಬೇಕಾಗುತ್ತದೆ. ಈ ತೊಂದರೆಗಳನ್ನೆಲ್ಲಾ ತಿಳಿದುಕೊಂಡು ವಿಚಾರ ಮಾಡಬೇಕಾಗುತ್ತದೆ. ಆದುದರಿಂದ ತಾವು ಒಂದು ತಿಂಗಳ ಒಳಗೆ ದುಡ್ಡನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್ ಎಲ್. ಜಾಲಪ್ಪ --ಅಧ್ಯಕ್ಷರೇ, ಚುನಾವಣೆ ಬಗ್ಗೆ ಏನು ತೊಂದರೆ ಆಗುವುದಿಲ್ಲ. ಆಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಬ್ಯಾಂಕುಗಳ ಅಧೀನದಲ್ಲಿರುವ ಪ್ರಾಥಮಿಕ ಸಹಕಾರಿ ಸಂಘಗಳು ಏನಿದೆ

ಅವುಗಳಿಗೆ ಏನು ಇಂಟರೆಸ್ಟ್ ಸಬ್ಸಿಡಿ ಕೊಡಬೇಕಾಗಿದೆ, ಅದು ಜಮಾ ಬಂದಿದೆ ಎಂದು ತಿಳಿದುಕೊಳ್ಳಿ ಎಂದು ಹೇಳಿದ್ದೇನೆ. ಇದರಿಂದ ಚುನಾವಣೆಗೆ ನಿಲ್ಲುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. ಇನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಈ ತೊಂದರೆ ಇಲ್ಲ. ರೈತರಿಗೆ ಅದನ್ನು ರೈಟ್ ಆಫ್ ಮಾಡ ಬೇಕೆಂದು ಪಿ ಎಲ್ ಡಿ ಬ್ಯಾಂಕುಗಳಿಗೆ ಎಸ್ ಎಲ್ ಡಿ ಬಿ ಬ್ಯಾಂಕುಗಳು ಜಾಮೀನು ಕೊಡುತ್ತವೆ. ಎಲ್ ಡಿಬಿಗೆ ನಾವು ಏಳು ಕೋಟಿ ರೂಪಾಯಿ ಕೊಡಬೇಕಾಗಿದ್ದು ಅದನ್ನು ಬ್ಯಾಲೆನ್ಸ್ ಶೀಟಿನಲ್ಲಿ ತೋರಿಸಲಾಗಿದೆ ಈಗಾಗಲೇ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಇನ್ನು 5 ಕೋಟಿ ರೂಪಾಯಿಗಳನ್ನು ಕೋಡಬೇಕಾ ಗಿದೆ. ಇದರಿಂದ ಚುನಾವಣೆಗೆ ನಿಲ್ಲುವುದಕ್ಕೆ ತೊಂದರೆಯಾಗುವುದಿಲ್ಲ. ಸಾಧ್ಯವಾದಷ್ಟು ಬೇಗ ಸಾಲ ಕೊಡುತ್ತಿದ್ದೇವೆ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.--ವಿಫಲಿತ ಭಾವಿಗಳಿಗೆ ತಾವು ರಿಯಾಯಿತಿ ಕೊಟ್ಟಿದ್ದು ಆ ಬಗ್ಗೆ ಭೂ ಅಭಿವೃದ್ಧಿ ಬ್ಯಾಂಕುಗಳು ಅನೇಕ ತಾಲ್ಲೂಕಿನಲ್ಲಿ ಅಸಕ್ತಿ ತೋರಿಸಿಲ್ಲ. ನಮ್ಮಲ್ಲಿ 150 ಜನ ಅರ್ಜಿ ಕೊಟ್ಟಿದ್ದು ಒಂದು ವರ್ಷವಾದರೂ ಇವರಿಗೆ ರಿಯಾಯಿತಿ ಸಿಕ್ಕಿರುವುದಿಲ್ಲ. ಆ ಬಗ್ಗೆ ಸರ್ಕಾರ ಆದಷ್ಟು ಬೇಗ ಕ್ರಮಕ್ಕೆಗೊಳ್ಳುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.--ಮಾನ್ಯ ಸದಸ್ಯರು ಹೇಳಿದ ಮಾತು ಸತ್ಯ ಇದೆ. ಈ ವಿಷಯ ನಮ್ಮ ಗಮನಕ್ಕೆ ಬಂದಿದೆ ಈ ಬಗ್ಗೆ ನಾವು ರೆವಿನ್ಯೂ ಕಮಿಷನರ್ ಹಾಗೂ ಅಸಿಸ್ಟೆಂಟ್ ಕಮಿಷನರ್ಸ್‌ಗೆ ಸೂಚನೆ ಕೊಟ್ಟು ಮುಂದಿನ ಜೂನ್ ತಿಂಗಳ ಒಳಗೆ ಇಂತಹ ಒಂದು ಕೇಸುಗಳೂ ಇರದಹಾಗೆ ನೋಡಿ ಕೊಳ್ಳುಬೇಕೆಂದು ಹೇಳಿದ್ದೇನೆ. ಪುನಃ ಈ ಬಗ್ಗೆ ನಾವು ಅವರಿಗೆ ತಿಳಿಸುತ್ತೇವೆ.

Temples under the pursiew of muzrai Department in the State.

322 (798) SRI C. M. ANANDA RAO (Shimoga).- will the Minister for Revenu be pleased state.

a) Whether it is a fact that the previous Government had declared to pay Rs. 100/- p. m. to the Archaks, of Muzrai Institution ?

b) If so what action taken by Government ?

c) No of Religious and Charitable Institutions belonging to Muzrai Department in the State,

d) Whether Tasdik amount is being paid to the temple and Mutt as per present Market value ?

SRI V.L. PATIL.--Revenue Minister No such records are forthcoming.

b) Does not arise.

c) 35, 844.

d) Tasdik is being paid as prescribed under the Act and Rules, but not on the basis of present Market Value.

Acqueisition of land in survey No.-60 at Marasandra.

SRI B. GANGANNA will the Minister for Revenue be pleased state that.

a) Whether it is a fact that the land in Sy. No. 60 of Marasandra; Chikkanayakanahalli, Kasaba Hobli is acquired for constructing a new Tank called Jalanakere.

b) Whether it is a fact that compensation has not been paid to the farmers whose lands have been acquired for the same.

c) the reason for non payment of compensation amount to the land owners.